<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.</u>

**SC.306/2025**

ಪಿರ್ಯಾದುದಾರರು : ಸರ್ಕಾರದ ಪರ ಹೊಸಕೋಟೆ ಪೊಲೀಸರು

- ವಿರುದ್ಧ -

ಆರೋಪಿತರು : ಮನೋಜ್ ಕುಮಾರ್ ರವಿದಾಸ್,
ತಂದೆ: ಸತಾನ್ ರವಿದಾಸ್,
ವಯಸ್ಸು 36 ವರ್ಷ
ವಾಸ: ನಕ್ಕೀಪುರ, ಬುಧುತೋಲಾ,
ಕೋರ್ದಾ ಥಾಣಾ, ಖಾತೀರ,
ಬಿಹಾರ ರಾಜ್ಯ 854 106.

<u>ದೋಷಾರೋಪಣೆ</u>

ನಾನು ಬಿ.ಎಸ್.ರೇಖಾ, ಬಿ.ಎ.(ಲಾ), ಎಲ್‌ಎಲ್.ಎಮ್, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು, ನೀವು-ಆರೋಪಿಯಾದ ಮನೋಜ್ ಕುಮಾರ್ ರವಿದಾಸ್ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ:

ನ್ಯಾಯಾಲಯದ ವ್ಯಾಪ್ತಿಗೆ ಒಳಪಡುವ ಹೊಸಕೋಟೆ ಪೊಲೀಸ್ ಠಾಣಾ ಸರಹದ್ದು, ಉಪ್ಪಾರಹಳ್ಳಿ ಗ್ರಾಮದಲ್ಲಿ, ಚಾಸಾ. 9 ರವರು ಹೊಸದಾಗಿ ಮನೆಯನ್ನು ಕಟ್ಟುತ್ತಿದ್ದು ಸದರಿ ಮನೆ ಗಾರೆ ಕೆಲಸಕ್ಕೆ ಮೃತ ರಮೇಶ್ ಕುಮಾರ್ ರವಿದಾಸ್, ಹೆಲ್ಪರ್ ಗಳಾದ ಆರೋಪಿಯಾದ ನೀನು ಮತ್ತು ಚಾಸಾ. 2 ಸೇಮಲ್ ಧೋರಿ ರವರುಗಳು ಅದೇ ಮನೆಯಲ್ಲಿಯೇ ತಾತ್ಕಾಲಿಕವಾಗಿ ವಾಸವಾಗಿದ್ದು ಹಾಗೂ ದಿನಾಂಕ 14.07.2025 ರಂದು ರಾತ್ರಿ ನೀರು ಕ್ಯಾನ್ ತರುವ ವಿಚಾರದಲ್ಲಿ ಮೃತ ರಮೇಶ್ ಕುಮಾರ್ ರವಿದಾಸ್ ಹಾಗೂ ಆರೋಪಿಯಾದ ನಿನಗೂ ಜಗಳವಾಗಿದ್ದು, ರಮೇಶ್ ಕುಮಾರ್ ಕುಡಿದ

ಅಮಲಿನಲ್ಲಿ ರಾತ್ರಿ 11-00 ಗಂಟೆ ಸಮಯದಲ್ಲಿ ಆರೋಪಿಯಾದ ನಿನ್ನನ್ನು ತಳ್ಳಿದ್ದರಿಂದ ನೆಲದ ಮೇಲಿದ್ದ ದಿಂಡುಕಲ್ಲಿನ ಮೇಲೆ ಬಿದ್ದು ಗಾಯವಾಗಿದ್ದು, ಇದರಿಂದ ಕೋಪಗೊಂಡ ಆರೋಪಿಯಾದ ನೀನು ಮನೋಜ್ ಕುಮಾರ್ ಸಾಯಿಸಬೇಕೆಂಬ ಉದ್ದೇಶದಿಂದ ಪಕ್ಕದಲ್ಲಿದ್ದ ನೀಲಗಿರಿ ದೊಣ್ಣೆಯನ್ನು ತೆಗೆದುಕೊಂಡು ರಮೇಶ್ ಕುಮಾರ್ ಗೆ ತಲೆಗೆ ಬಲವಾಗಿ ಹೊಡೆದಿದ್ದರಿಂದ ರಕ್ತಗಾಯವಾಗಿ ಚಿಕಿತ್ಸೆ ಫಲಕಾರಿಯಾಗದೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ದಿನಾಂಕ 16.07.2025 ರಂದು ಮದ್ಯಾಹ್ನ 2-10 ಗಂಟೆ ಸಮಯದಲ್ಲಿ ಮೃತಪಟ್ಟಿರುತ್ತಾರೆ ಆದ್ದರಿಂದ ಆರೋಪಿಯಾದ ನೀನು ಭಾರತೀಯ ನ್ಯಾಯಾ ಸಂಹಿತೆ ಕಲಂ 103 ರನ್ವಯ ಅಪರಾಧ ಮಾಡಿರುತ್ತೀರಿ

ಈ ಅಪರಾಧವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಇದ್ದು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ಈ ಮೂಲಕ ನಿರ್ದೇಶಿಸುತ್ತೇನೆ.

**(ಈ ದಿನ ದಿನಾಂಕ 14 ನೇ ಜನವರಿ, 2026)**

(ಶ್ರೀಮತಿ ಬಿ.ಎಸ್.ರೇಖಾ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ,
ಬೆಂಗಳೂರು.